ದೂರವಾಣಿ: 22341691

ಕರ್ನಾಟಕ ಸರ್ಕಾರ

(ವಿದ್ಯುತ್ ಪರಿವೀಕ್ಷಣಾಲಯ)

ಸಂಖ್ಯೆ : ಮುವಿಪ/ವಿಪಇ/ಎಲ್ಇಸಿ/ **251** /2015-16

ಮುಖ್ಯ ವಿದ್ಯುತ್ ಪರಿವೀಕ್ಷರ ಕಛೇರಿ
#32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ,
ಬೆಂಗಳೂರು - 560 001

ದಿನಾಂಕ: **28-09-2015**

## "ಸುತ್ತೋಲೆ"

**ವಿಷಯ:** ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ / ತಂತೀ ಕೆಲಸಗಾರರ ಮತ್ತು ವಿಶೇಷ ತಂತೀ ಕೆಲಸಗಾರರ ರಹದಾರಿಗಳ ಹೊಸದು / ನವೀಕರಣ ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲಿಸಿ ಮತ್ತು ಕೇಂದ್ರ ಕಚೇರಿಗೆ ಶಿಪಾರಸ್ಸು ಮಾಡುವಲ್ಲಿ ಆಗುತ್ತಿರುವ ಲೋಪದೋಶಗಳ ಕುರಿತು.

**ಓದಲಾಗಿದೆ:** ಈ ಕಚೇರಿ ಸುತ್ತೋಲೆ ಸಂಖ್ಯೆ: ಮುವಿಪ/ವಿಪಇ/ಎಲ್ಇಸಿ/1004 - 41/2014-15 ದಿನಾಂಕ: 16-09-2014

.*****

ಕರ್ನಾಟಕ (ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಮೇಲ್ವಿಚಾರಕರ, ತಂತಿ ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ವಿಶೇಷ ತಂತೀ ಕೆಲಸಗಾರರ ರಹದಾರಿ ನೀಡಿಕೆ) ನಿಯಮಗಳು 2012 ರ ನಿಯಮ 12, 13, 19, 23, 26, 28 ಮತ್ತು 32ರ ಅಡಿಯಲ್ಲಿರುವಂತೆ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ / ತಂತೀ ಕೆಲಸಗಾರರ ಮತ್ತು ವಿಶೇಷ ತಂತೀ ಕೆಲಸಗಾರರ ರಹದಾರಿಗಳ ಹೊಸದು / ನವೀಕರಣ ಅರ್ಜಿಗಳನ್ನು ಆಯಾ ಜಿಲ್ಲೆಯ ಉಪ ವಿದ್ಯುತ್ ಪರಿವೀಕ್ಷಕರುಗಳ ಕಚೇರಿಗಳಲ್ಲಿ ಸ್ವೀಕರಿಸಿ, ನಂತರ ಪರಿಶೀಲಿಸಿ ಮತ್ತು ಕೇಂದ್ರ ಕಚೇರಿಗೆ ಶಿಪಾರಸ್ಸು ಮಾಡುತ್ತಿರುವುದು ಸರಿಯಷ್ಟೆ, ಆದರೆ ಸದರಿ ಮೇಲೆ ವಿವರಿಸಿರುವ ಹಾಗೆ ಸ್ವೀಕರಿಸಿದ ಕೇಂದ್ರ ಕಚೇರಿಗೆ ರವಾನಿಸಿದ ಅರ್ಜಿಗಳನ್ನು ಕೇಂದ್ರ ಕಚೇರಿಯಲ್ಲಿ ಪರಿಶೀಲಿಸಿದಾಗ, ಕೆಲವು ಅರ್ಜಿಗಳಲ್ಲಿ ಹಲವಾರು ಪುನರಾವರ್ತಿತ ನ್ಯೂನ್ಯತೆಗಳು ಕಂಡು ಬಂದಿರುತ್ತದೆ. ಆದರೆ ಅಂತಹಾ ಸಾಮಾನ್ಯಾ ಪುನರಾವರ್ತಿತ ನ್ಯೂನ್ಯತೆಗಳು ಇದ್ದರೂ ಸಹಾ ಉಪ ವಿದ್ಯುತ್ ಪರಿವೀಕ್ಷಕರುಗಳು ಯಾವುದೇ ರೀತಿಯ ಷರಾಗಳನ್ನು ನಮೂಧಿಸದೆ ಅಂತಹಾ ಅರ್ಜಿಗಳನ್ನು ಕೇಂದ್ರ ಕಚೇರಿಗೆ ಶಿಪಾರಸ್ಸು ಮಾಡುತ್ತಿರುವುದು ಕಂಡುಬಂದಿರುತ್ತದೆ. ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ / ತಂತೀ ಕೆಲಸಗಾರರ ಮತ್ತು ವಿಶೇಷ ತಂತೀ ಕೆಲಸಗಾರರ ರಹದಾರಿಗಳ ಹೊಸದು / ನವೀಕರಣ ಅರ್ಜಿಗಳನ್ನು ಸ್ವೀಕರಿಸಿ ಅವುಗಳನ್ನು ಪರಿಶೀಲಿಸುವ ಬಗ್ಗೆ ಹಾಗು ಸರ್ವೆಸಾಮಾನ್ಯ ನ್ಯೂನ್ಯತೆಗಳ ಕುರಿತು ಈ ಕಚೇರಿಯಿಂದ ಹಲವಾರು ಸಲಹೆ ಸೂಚನೆಗಳನ್ನು ಮತ್ತು ವಿವರವಾದ ನಿರ್ಧೇಶನಗಳನ್ನು ಸುತ್ತೋಲೆಗಳ ಮುಖಾಂತರ ತಿಳಿಸಲಾಗಿರುತ್ತದೆ ಉದಾಹರಣೆಗೆ ಉಲ್ಲೇಖದಲ್ಲಿರುವ ಸುತ್ತೋಲೆಯನ್ನು ಗಮನಿಸಬಹುದು.

ಆದರೂ ಸಹಾ ಅರ್ಜಿಗಳ ಪರಿಶೀಲನೆಯಲ್ಲಿ ಆಗುತ್ತಿರುವ ಈ ಕೆಳಕಂಡ ಸಾಮಾನ್ಯವಾದ ನ್ಯೂನ್ಯತೆಗಳು ಮುಂದುವರೆದುಕೊಂಡು ಬರುತ್ತಿರುವುದು ಕಂಡುಬಂದಿರುತ್ತದೆ.

1. ಅರ್ಜಿ ನಮೂನೆಯ ಎಲ್ಲಾ ಕಾಲಂಗಳನ್ನು ಸೂಕ್ತವಾಗಿ ಭರ್ತಿ ಮಾಡದೆ ಖಾಲಿ ಬಿಡುವುದು.
2. ಅರ್ಜಿದಾರರು ಅರ್ಜಿಯ ಕೊನೆಯಲ್ಲಿ ಸಹಿ ಮಾಡದೆ ಇರುವುದು.
3. ಉಪ ವಿಭಾಗದಲ್ಲಿ ಸ್ವೀಕರಿಸಿದ ಅರ್ಜಿಗೆ ಸ್ವೀಕೃತಿ ಸಂಖ್ಯೆ ಮತ್ತು ದಿನಾಂಕ ಬರೆಯದೆ ಇರುವುದು.
4. ಉಪ ವಿದ್ಯುತ್ ಪರಿವೀಕ್ಷಕರು ಅರ್ಜಿಯನ್ನು ಸ್ವೀಕರಿಸಿದ ಬಗ್ಗೆ ದಿನಾಂಕದೊಂದಿಗೆ ಸಹಿ ಮಾಡದೆ ಇರುವುದು ಮತ್ತು ಸೀಲು ಹಾಕದೆ ಇರುವುದು.
5. ನಿಗಧಿತ ವಿದ್ಯುತ್ ಉಪಕರಣಗಳನ್ನು ಪರಿಶಿಲಿಸಿದ ಬಗ್ಗೆ ಉಪ ವಿದ್ಯುತ್ ಪರಿವೀಕ್ಷಕರು ಅವರ ಪದನಾಮದೊಂದಿಗೆ ಸಹಿ ಮಾಡದೇ ಇರುವುದು.
6. ಅರ್ಜಿದಾರರ ಕನಿಷ್ಠ ವಿದ್ಯಾರ್ಹತೆಯ ದಾಖಲೆ, ವಿಶೇಷವಾಗಿ 10ನೇ ತರಗತಿ ಉತ್ತೀರ್ಣರಾಗಿರುವ ಬಗ್ಗೆ ಅಂಕ ಪಟ್ಟಿಯನ್ನು ಧೃಡೀಕರಿಸದೆ ಸಲ್ಲಿಸುವುದು. ಆದರೆ ಅನವಶ್ಯಕವಾಗಿ ಅರ್ಜಿದಾರರ ನಡತೆ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ, ಅಥವಾ ವಿದ್ಯಾಭ್ಯಾಸ ಪೂರ್ಣಗೊಳಿಸಿದ ಬಗ್ಗೆ ಪ್ರಮಾಣ ಪತ್ರ ಲಗತ್ತಿಸುತ್ತಿರುವುದು.
7. ವಿದ್ಯುತ್ ಗುತ್ತಿಗೆದಾರರ ವರ್ಗ-1 ಮತ್ತು ಸೂಪರ್ ಗ್ರೇಡ್ ಪರವಾನಗಿಯ ಅರ್ಜಿಯ ಜೊತೆಗೆ ಕಡ್ಡಾಯವಾಗಿ ಇರಬೇಕಾದ ವ್ಯವಹಾರಿಕಾ ವಾಣಿಜ್ಯ ವಿಳಾಸದ ಬಗ್ಗೆ ಕಚೇರಿ ಅಥವಾ ಮಳಿಗೆಯ ಬಾಡಿಗೆ ಅಥವಾ ಭೋಗ್ಯದ ಪ್ರಮಾಣ ಪತ್ರ ಮತ್ತು ಅದರೊಂದಿಗೆ ಇತ್ತಿಚಿನ ವಿದ್ಯುಚ್ಛಕ್ತಿ ಬಿಲ್ (ಎಲ್ ಟಿ 3)ನ ಪ್ರತಿ ಅಥವಾ ಸ್ವಂತ ಕಟ್ಟಡವಾಗಿದ್ದಲ್ಲಿ ಖಾತಾ ಪ್ರಮಾಣ ಪತ್ರ, ತೆರಿಗೆ ಪಾವತಿ ರಸೀತಿಯೊಂದಿಗೆ ಇತ್ತಿಚಿನ ವಿದ್ಯುಚ್ಛಕ್ತಿ ಬಿಲ್ (ಎಲ್ ಟಿ 3)ನ ಪ್ರತಿ ಸಲ್ಲಿಸಬೇಕಾಗಿರುತ್ತದೆ. ಆದರೆ ಅರ್ಜಿಯೊಂದಿಗೆ ಎಲ್ ಟಿ -2ಎ ಬಿಲ್ಲಿನ ಪ್ರತಿಯನ್ನು ಲಗತ್ತಿಸುವುದು.
8. ಅರ್ಜಿಯೊಂದಿಗೆ ಸಲ್ಲಿಸುವ ಎಲ್ಲಾ ಪ್ರತಿಗಳನ್ನು ಉಪ ವಿದ್ಯುತ್ ಪರಿವೀಕ್ಷಕರಾಗಲಿ ಅಥವಾ ನೋಟರಿಯವರಾಗಲಿ ಧೃಡಿಕರಿಸದೇ ಲಗತ್ತಿಸುವುದು.
9. ನಿಯಮಿತವಾಗಿ ಕಡತದಲ್ಲಿನ ದಾಖಲೆಗಳಿಗೆ ಪುಟ ಸಂಖ್ಯೆಯನ್ನು ಬರೆಯದೆ ಬೇಕಾಬಿಟ್ಟಿ ದಾಖಲೆಗಳನ್ನು ಅಳವಡಿಸುವುದು.
10. ಅರ್ಜಿದಾರರ ಇತ್ತಿಚಿನ ಭಾವ ಚಿತ್ರಗಳ ಬದಲು ಸ್ಕ್ಯಾನ್ ಮಾಡಿದ ಹಳೆಯ ಭಾವ ಚಿತ್ರಗಳನ್ನೇ ಲಗತ್ತಿಸುವುದು.

ಈ ರೀತಿ ನ್ಯೂನ್ಯತೆಯ ಅರ್ಜಿಗಳನ್ನು ಸರಿಯಾಗಿದೆ ಎಂದು ಅರ್ಜಿದಾರರುಗಳಿಗೆ ಸ್ವೀಕೃತಿಯನ್ನು ನೀಡಿದ ನಂತರ ಕೇಂದ್ರ ಕಚೇರಿಗೆ ಕಳುಹಿಸುವುದರಿಂದ, ಸದರಿ ಅರ್ಜಿಗಳನ್ನು ಕೇಂದ್ರ ಕಚೇರಿಯಲ್ಲಿ ಪರಿಶೀಲಿಸಿ ಮತ್ತೊಮ್ಮೆ ಅರ್ಜಿದಾರರುಗಳಿಗೆ ನ್ಯೂನ್ಯತೆಗಳನ್ನು ಸರಿಪಡಿಸಲು ಕೋರಬೇಕಾಗುತ್ತದೆ. ಈ ರೀತಿ ಕೇಂದ್ರ ಕಚೇರಿಯಿಂದ ಅರ್ಜಿದಾರರುಗಳಿಗೆ ನ್ಯೂನ್ಯತೆಗಳನ್ನು ಸರಿಪಡಿಸಲು ಕೋರುವುದರಿಂದ ಅಂತಹಾ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಭವಾಗುವುದು.

ಆದ್ದರಿಂದ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ / ತಂತೀ ಕೆಲಸಗಾರರ ಮತ್ತು ವಿಶೇಷ ತಂತೀ ಕೆಲಸಗಾರರ ರಹದಾರಿಗಳ ಹೊಸದು / ನವೀಕರಣ ಅರ್ಜಿಗಳನ್ನು ಸ್ವೀಕರಿಸುವ ಸಮಯದಲ್ಲಿ ಅರ್ಜಿಯೊಂದಿಗೆ ಅಳವಡಿಸುವ ಎಲ್ಲಾ ಉಪಲಬ್ದ ದಾಖಲೆಗಳು ಸರಿಯಾಗಿ ಇದೆಯೇ ಅಥವಾ ಏನಾದರೂ ನ್ಯೂನ್ಯತೆಗಳಿವೆಯೇ ಎಂದೂ ಪರಿಶೀಲಿಸಿ, ಅರ್ಜಿಯು ನಿಯಮಾನುಸಾರ ಇದೆ ಎಂದು ಕಂಡುಬಂದಲ್ಲಿ ಸರಿಯಾಗಿದೆ ಎಂದೂ ಅರ್ಜಿಯ ಮೇಲೆ ನಮೂಧಿಸುವುದು ಒಂದೊಮ್ಮೆ ನ್ಯೂನ್ಯತೆಗಳಿದ್ದಲ್ಲಿ ಅರ್ಜಿದಾರರಿಗೆ ನ್ಯೂನ್ಯತೆಗಳ ಬಗ್ಗೆ ಮೌಖಿಕವಾಗಿ ತಿಳಿಸುವುದು ಮತ್ತು ಅವರಿಗೆ ನೀಡುವ ಸ್ವೀಕೃತಿಯಲ್ಲಿ ಅರ್ಜಿಯಲ್ಲಿ ಇರುವಂತಹ ನ್ಯೂನ್ಯತೆಗಳನ್ನು ಸ್ಪಷ್ಟವಾಗಿ ನಮೂಧಿಸಿ ಅರ್ಜಿದಾರರಿಗೆ ಸೂಕ್ತ ಸ್ವೀಕೃತಿ ಪತ್ರ ನೀಡುವುದು ಹಾಗು ಅಂತಹಾ ಅರ್ಜಿಯ ಮೇಲೆ ಇರುವಂತಹಾ ನ್ಯೂನ್ಯತೆಗಳನ್ನು ಸ್ಪಷ್ಟವಾಗಿ ಕೆಂಪು ಶಾಹಿಯಲ್ಲಿ ಉಪ ವಿದ್ಯುತ್ ಪರಿವೀಕ್ಷಕರ ಅಭಿಪ್ರಾಯವನ್ನು ನಮೂಧಿಸಿ ಕೇಂದ್ರ ಕಚೇರಿಗೆ ಕಳುಹಿಸುವುದು.

ಈ ಮೇಲೆ ಸೂಚಿಸಿರುವಂತೆ ಇನ್ನುಮುಂದೆ ವಿದ್ಯುತ್ ಗುತ್ತಿಗೆದಾರರ ಪರವಾನಗಿಗಳು, ವಿದ್ಯುತ್ ಮೇಲ್ವಿಚಾರಕರ / ತಂತೀ ಕೆಲಸಗಾರರ ಮತ್ತು ವಿಶೇಷ ತಂತೀ ಕೆಲಸಗಾರರ ರಹದಾರಿಗಳ ಹೊಸದು / ನವೀಕರಣ ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲಿಸಿ ಕೇಂದ್ರ ಕಚೇರಿಗೆ ಕಳುಹಿಸುವ ಅರ್ಜಿಗಳಲ್ಲಿ ಮೇಲೆ ತಿಳಿಸಿರುವ ಪುನರಾವರ್ತಿತ ನ್ಯೂನ್ಯತೆಗಳೇನಾದರೂ ಕಂಡು ಬಂದಲ್ಲಿ ಅಥವಾ ಮುಂದುವರೆದಲ್ಲಿ ಸದರಿ ಅರ್ಜಿಯ್ನನು ಶಿಫಾರಸ್ಸು ಮಾಡಿರುವ ಉಪ ವಿದ್ಯುತ್ ಪರಿವೀಕ್ಷಕರಗಳ ಕರ್ತವ್ಯ ನಿರ್ಲಕ್ಷತನವನ್ನು ದುರ್ನಡತೆಯೆಂದು ಪರಿಗಣಿಸಿ ಸದರಿ ವಿವರಗಳನ್ನು ಅವರುಗಳ ವಾರ್ಷಿಕ ವರಧಿಯಲ್ಲಿ ಮತ್ತು ಸೇವಾ ಪುಸ್ತಕದಲ್ಲಿ ನಮೂಧಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

20/9/15

ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ

1. ಎಲ್ಲಾ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,
2. ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
3. ಎಲ್ಲಾ ವಿದ್ಯುತ್ ಪರಿವೀಕ್ಷಕರು,
4.ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು,